ಕುವೆಂಪು ವಿಶ್ವವಿದ್ಯಾಲಯ
**KUVEMPU UNIVERSITY**
(Accredited by NAAC with "A" Grade & Ranked 73rd by NIRF-2019)
3rd Rank in KSURF

(O) 08282-256221
(M) : 9449825221
Fax : 08282-256262
E-mail : reg.admn@kuvempu.ac.in
kureg14@gmail.com
Website : www.kuvempu.ac.in

ಪ್ರೊ. ಎಸ್.ಎಸ್. ಪಾಟೀಲ್, ಎಂ.ಎಸ್ಸಿ., ಎಂ.ಇಡಿ., ಪಿಹೆಚ್.ಡಿ.,
ಕುಲಸಚಿವ
**Prof. S.S. Patil,** M.Sc., M.Ed., Ph.D.,
Registrar

ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577 451,
ಶಿವಮೊಗ್ಗ ಜಿಲ್ಲೆ, ಕರ್ನಾಟಕ
Jnanasahyadri, Shankaraghatta-577 451,
Shivamogga Dist., Karnataka, India.

ಸಂಖ್ಯೆ. ಕುವಿ:ಕುಸ:ಎ:6: 6922 :2019–20 ದಿನಾಂಕ:25–02–2020

ಗೆ,
ಅರಣ್ಯ ಸಂರಕ್ಷಣಾಧಿಕಾರಿ
ಮತ್ತು ಕ್ಷೇತ್ರ ನಿರ್ದೇಶಕರು,
ಭದ್ರಾ ಹುಲಿ ಯೋಜನೆ,
ಚಿಕ್ಕಮಗಳೂರು.

ಮಾನ್ಯರೆ,

**ವಿಷಯ:** ಕುವೆಂಪು ವಿಶ್ವವಿದ್ಯಾಲಯಕ್ಕೆ ನೀಡಿರುವ 230 ಎಕರೆ ಭೂಪ್ರದೇಶದ ಗುತ್ತಿಗೆ ಅವಧಿ ನವೀಕರಣ ಕುರಿತು.

**ಉಲ್ಲೇಖ:**
1. ಆನ್‌ಲೈನ್ ಪರಿಷ್ಕೃತ ಪ್ರಸ್ತಾವನೆ ಸಲ್ಲಿಸಲಾದ ದಿನಾಂಕ:16–11–2019.
2. ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಕ್ಷೇತ್ರ ನಿರ್ದೇಶಕರು, ಭದ್ರಹುಲಿ ಯೋಜನೆ ಚಿಕ್ಕಮಗಳೂರು – ಇವರ ಕಛೇರಿ ಪತ್ರ ಸಂಖ್ಯೆ:ಎ:5:ಲ್ಯಾಂಡ್:ಸಿಆರ್:09:2008–09 :3030 ದಿನಾಂಕ:06–02–2020.
3. ದಿನಾಂಕ:19–02–2020 ರಂದು ನಡೆದ ಸಭೆ.
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:25–02–2020.

--***--

ಸೂಚಿತ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಅರಣ್ಯ ಇಲಾಖೆಯಿಂದ ಕುವೆಂಪು ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ 230 ಎಕರೆ(93.08 ಹೆಕ್ಟೇರ್) ಭೂಪ್ರದೇಶದ ಗುತ್ತಿಗೆ ಅವಧಿ ನವೀಕರಣಕ್ಕಾಗಿ ಅರಣ್ಯ ಸಂರಕ್ಷಣೆ ಕಾಯ್ದೆ 1980 ಕಾಲಂ(2)ರ ಅಡಿಯಲ್ಲಿ ಪರಿಷ್ಕೃತ ಆನ್‌ಲೈನ್ ಪ್ರಸ್ತಾವನೆಯನ್ನು ಅಗತ್ಯ ದಾಖಲಾತಿಗಳೊಂದಿಗೆ ಉಲ್ಲೇಖ(01)ರಲ್ಲಿ ಸಲ್ಲಿಸಲಾಗಿದ್ದು, ಈ ಕುರಿತು ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಕ್ಷೇತ್ರ ನಿರ್ದೇಶಕರು, ಭದ್ರಹುಲಿ ಯೋಜನೆ ಚಿಕ್ಕಮಗಳೂರು – ಇವರು ಉಲ್ಲೇಖಿತ(02)ರಲ್ಲಿ ಆಕ್ಷೇಪಣೆಯನ್ನು ವ್ಯಕ್ತಪಡಿಸಿರುತ್ತಾರೆ. ವ್ಯಕ್ತಪಡಿಸಲಾದ ಆಕ್ಷೇಪಣೆಗೆ ಸಂಬಂಧಿಸಿದಂತೆ ದಿನಾಂಕ:19–02–2020 ರಂದು ಮಾನ್ಯ ಮುಖ್ಯಮಂತ್ರಿಗಳ ಗೃಹಕಛೇರಿ 'ಕೃಷ್ಣ'ದಲ್ಲಿ ಶಿವಮೊಗ್ಗ ಜಿಲ್ಲಾ ಮಾನ್ಯ ಸಂಸದರಾದ ಶ್ರೀ ಬಿ.ವೈ.ರಾಘವೇಂದ್ರ ಇವರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಬಿ.ಪಿ.ವೀರಭದ್ರಪ್ಪ, ಕುಲಸಚಿವರಾದ ಪ್ರೊ.ಎಸ್.ಎಸ್.ಪಾಟೀಲ್ ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳಾದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ), ಅಪಾರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು, ಅರಣ್ಯ ಸಂರಕ್ಷಣಾಧಿಕಾರಿ, ಭದ್ರಹುಲಿ ಯೋಜನೆ, ಚಿಕ್ಕಮಗಳೂರು ಇವರುಗಳು ಹಾಜರಿದ್ದ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಗಿರುವ ವಿಷಯವನ್ನು ಈ ಮೂಲಕ ತಮ್ಮ ಗಮನಕ್ಕೆ ತರಲಾಗಿದೆ.

ಈ ಸಭೆಯಲ್ಲಿ ತಾವು ಸಹ ಹಾಜರಿದ್ದು, ಈಗಾಗಲೇ ಸರ್ವೋಚ್ಛ ನ್ಯಾಯಾಲಯ ಮತ್ತು ಕೇಂದ್ರ ಹಸಿರು ಪೀಠ ನಿರ್ದೇಶನದಂತೆ ಕೇಂದ್ರ ಅರಣ್ಯ ಮತ್ತು ವನ್ಯಜೀವಿ ಇಲಾಖೆಯು Forest Conservation Act ಪ್ರಕಾರ ವಿಶ್ವವಿದ್ಯಾಲಯವು ನೀಡಬೇಕಾದ ಬದಲಿ ಜಮೀನಿನ ಬಗ್ಗೆ ಒಟ್ಟು 339.00 ಹೇಕ್ಟರ್‌ನಷ್ಟು ಜಮೀನನ್ನು ನೀಡಲು ಷರತ್ತನ್ನು ವಿಧಿಸಿರುತ್ತದೆ. ಇದಕ್ಕೆ ಪರ್ಯಾಯವಾಗಿ ರಾಜ್ಯಸರ್ಕಾರವು ಅಂದಾಜು 384.00 ಹೇಕ್ಟರ್‌ನಷ್ಟು (950.25 ಎಕರೆಯಷ್ಟು) ಬದಲಿ ಜಮೀನನ್ನು ಚಿಕ್ಕಮಗಳೂರು ಜಿಲ್ಲೆಯ ಕೆಸವಿನ ಮನೆ ಹಾಗೂ ತಿಗಡ ಪ್ರದೇಶದಲ್ಲಿ ನೀಡಿದ್ದು, ಈ ಕುರಿತು ಅಗತ್ಯ ದಾಖಲಾತಿಗಳನ್ನು ವಿಶ್ವವಿದ್ಯಾಲಯವು ಆನ್‌ಲೈನ್ ಮೂಲಕ ಪ್ರಸ್ತಾವನೆಯ ಜೊತೆಗೆ ಸಲ್ಲಿಸಿರುತ್ತದೆ. ಈಗಾಗಲೇ ಹೆಚ್ಚಿನ ಪ್ರಮಾಣದಲ್ಲಿ ಪರ್ಯಾಯ ಜಮೀನನ್ನು ನೀಡಿರುವುದರಿಂದ ಮತ್ತೆ 230 ಎಕರೆಯಷ್ಟು ಹೆಚ್ಚುವರಿ ಜಮೀನನ್ನು ಮತ್ತೊಮ್ಮೆ ನೀಡುವ ಅವಶ್ಯಕತೆ ಇರುವುದಿಲ್ಲವೆಂಬುವುದನ್ನು ವಿಶ್ವವಿದ್ಯಾಲಯದ ಅಧಿಕಾರಿಗಳು ತಮ್ಮ ಸಮ್ಮುಖದಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ತಾವು ಸಹ ಸಮ್ಮತಿಸಿರುವುದು ಸಂತೋಷದ ವಿಷಯವಾಗಿದೆ.

...2

ಈಗಾಗಲೇ ಪರ್ಯಾಯವಾಗಿ ನೀಡಿರುವ 950.25 ಎಕರೆಯಷ್ಟು ಬದಲಿ ಜಮೀನಿನ ಅಗತ್ಯ ದಾಖಲಾತಿಗಳನ್ನು ಆನ್‌ಲೈನ್ ಪ್ರಸ್ತಾವನೆಯಲ್ಲಿ ಸಲ್ಲಿಸಲಾಗಿದ್ದು, ಈ ದಾಖಲಾತಿಗಳನ್ನು ಪರಿಗಣಿಸಿ ತಮ್ಮ ಹಂತದಲ್ಲಿ ಬಾಕಿ ಇರುವ ವಿಶ್ವವಿದ್ಯಾಲಯದ 222 ಎಕರೆ (89.84 ಹೆ.) ಜಮೀನಿನ ಗುತ್ತಿಗೆ ಅವಧಿ ನವೀಕರಣಕ್ಕೆ ಸಂಬಂಧಿಸಿದ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದು ಈ ಮೂಲಕ ಕೋರಲು ನಿರ್ದೇಶಿತನಾಗಿದ್ದೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವ
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ-577 451